P.C.R.12/2017
C.w. 2

ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಪಿ. ಸಿ.ಆರ್. ಸಂಖ್ಯೆ: 12/2017

ಸಾಕ್ಷಿದಾರರ ಹೆಸರು	ಜಿ. ಹೆಚ್. ಬಸವಕುಮಾರ		
ತಂದೆಯ ಹೆಸರು	ಜ್ಯೋತಿ ಬಸವರಾಜಪ್ಪ	ಸಿ.ಡಬ್ಲೂ	2
ವಯಸ್ಸು	42 ವರ್ಷ	ಪ್ರಮಾಣ ವಚನ ನೀಡಲಾದ	
ಉದ್ಯೋಗ	ಕೂಲಿ ಕೆಲಸ	ದಿನಾಂಕಃ 01-02-2020.	
ವಾಸ ಸ್ಥಳ	ಭದ್ರಾವತಿ, ಶಿವಮೊಗ್ಗ ಜಿಲ್ಲೆ		

ಸ್ವಯಂ ಪ್ರಮಾಣ ಪೂರ್ವಕ ಹೇಳಿಕೆ

ಈ ಪ್ರಕರಣದಲ್ಲಿನ ಪಿರ್ಯಾದುದಾರರು ಮತ್ತು ಆರೋಪಿಗಳು ನನಗೆ ಗೊತ್ತು. ಮಾಚಿಹಳ್ಳಿ ಗ್ರಾಮದ ಸರ್ವೆ ನಂಬರ್ 160/ಬಿ ಜಮೀನು ನನ್ನ ತಂದೆಯವರಿಗೆ ಸೇರಿದ್ದು. ಅವರ ಸಂಬಂಧಿಕರು ಎಲ್ಲ ಸೇರಿ ಪಾಲು ವಿಭಾಗ ಮಾಡಿಕೊಳ್ಳಬೇಕೆಂದು ಅಂದುಕೊಂಡಿದ್ದರು. ಪಾಲುವಿಭಾಗ ಮಾಡಿಕೊಳ್ಳಲು ಹೋದಾಗ ನೀಲಮ್ಮ ಎನ್ನುವವರು 4 ಭಾಗ ಆಗಬೇಕಾಗಿದ್ದನ್ನ 2 ಭಾಗ ಮಾಡಿ ಗೌರಮ್ಮ ಮತ್ತು ಸಿದ್ದಲಿಂಗಮ್ಮ ಎನ್ನುವವರ ಹೆಸರುಗಳನ್ನು ಬಿಟ್ಟಿದ್ದರು. ನಾನು ಮತ್ತು ನನ್ನ ತಂದೆ ಇಬ್ಬರೂ ಸೇರಿ ತಾಲ್ಲೂಕು ಕಚೇರಿಗೆ ದೂರನ್ನು ಕೊಟ್ಟಿದ್ದೆವು. ಆನಂದನಾಯ್ಕ ಮತ್ತು ಜಿಂಗಾಡೆ ಸೇರಿಕೊಂಡು ಅಳವಂಡಿ ವೀರಣ್ಣ ಎನ್ನುವವರಿಗೆ 7 ಎಕರೆ 72 ಸೆಂಟ್ಸ್ ಜಮೀನನ್ನು ಮಾರಾಟ ಮಾಡಿದ್ದರು. ಆ ರೀತಿ ಮೋಸ ಮಾಡಿ ರಿಜಿಸ್ಟರ್ ಮಾಡಿಕೊಟ್ಟಿರುತ್ತಾರೆ. ನಾವು ಹೊಲಕ್ಕೆ ಹೋದಾಗ ಅವರುಗಳು ದೌರ್ಜನ್ಯ ಮಾಡುತ್ತಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಹರಪನಹಳ್ಳಿ